# ಬಿಡಿ–ಇಡಿ

ನಾವು ಜೀವನವನ್ನು ನೋಡುವ ಬಗೆ ಯಾವುದು? ಈ ಪ್ರಶ್ನೆಗೆ ಪ್ರತಿಯೊಬ್ಬರೂ ತಮ್ಮತಮ್ಮದೇ ವಿವರಗಳನ್ನು ನೀಡುತ್ತಾರೆ. ಆದರೆ, ಅವರ ವಿವರಗಳನ್ನೆಲ್ಲ ನೋಡಿದಾಗ ಎರಡು ಮುಖ್ಯತತ್ವಗಳು ನಮಗೆ ಎದ್ದುಕಾಣುತ್ತವೆ. ಒಂದು ವಿಭಕ್ತ ನೆಲೆ, ಮತ್ತೊಂದು ಅವಿಭಕ್ತ ನೆಲೆ. ವಿಭಕ್ತ ಎಂದರೆ ಬಿಡಿಯಾದುದು, ಅವಿಭಕ್ತವೆಂದರೆ ಇಡಿಯಾದುದು. ನಮ್ಮ ಬುದ್ಧಿಯು ಯಾವಾಗಲೂ ಒಡೆದು, ಬಿಡಿಬಿಡಿಯಾಗಿ ನೋಡಲು ಅಪೇಕ್ಷಿಸುತ್ತದೆ. ಇದು ಕುತೂಹಲ ಜನಿತ ಸಂಗತಿ. ಇನ್ನೊಂದು ಬಗೆಯುಂಟು. ಅದು ಎಲ್ಲವನ್ನೂ ಇಡಿಯಾಗಿ ನೋಡುತ್ತದೆ. ಬಿಡಿಯಲ್ಲಿ ಅರ್ಧ ತಿಳಿವಳಿಕೆಗಳು, ಅಪ್ರಜ್ಞಾ ಸಂಗತಿಗಳು ಮನೆ ಮಾಡಿರುತ್ತವೆ ಎಂದು ತಿಳಿದವರು ಹೇಳುತ್ತಾರೆ. ಆದರೆ, ಇಡಿಯಲ್ಲಿ ಒಂದು ಸಂಪೂರ್ಣತೆ, ಒಂದು ಪೂರ್ಣತೆ ನಮಗೆ ಸೂರ್ಯಸ್ಪಷ್ಟವಾಗಿ ಕಾಣುತ್ತದೆ.

ನಮ್ಮ ಸಮಾಜವು ಇಡಿಯಾಗಿ ಬದುಕಬೇಕೆಂದು ಪೂರ್ವಿಕರು ಭಾವಿಸುತ್ತಿದ್ದರು. ಈ ಕಾರಣದಿಂದ 'ವಸುಧೈವ ಕುಟುಂಬಕಮ್' ಎಂಬಂಥ ಮಾತು ಬಳಕೆಗೆ ಬಂದಿತು. ನಾವು ಭೂಮಿಯನ್ನು ಕೇವಲ ಮಣ್ಣೆಂದು ಭಾವಿಸುವುದಿಲ್ಲ. ಅಲ್ಲಿ ತಾಯಿಯ ಭಾವನೆ ಉಂಟು. ಭೂದೇವಿ, ಭೂತಾಯಿ ಎಂಬಂಥ ಮಾತುಗಳು ರೂಪು ಪಡೆಯಲು ಇದೇ ಕಾರಣ! 'ಭರತವರ್ಷ' ಅಥವ 'ಭರತಖಂಡ' ಎಂದಾಗ ಪೂರ್ವಪಶ್ಚಿಮ; ಉತ್ತರದಕ್ಷಿಣದ ಸಮಸ್ತ ಎಲ್ಲೆಗಳ ವಿಸ್ತಾರ ನಮ್ಮ ಕಣ್ಣ ಮುಂದೆ ಬರುತ್ತದೆ. ದಿಗ್ವಾಚಕಗಳು ನಾಲ್ಕಾದರೂ ಅವು ಪರಸ್ಪರ ಅವಯವಅವಯವಿ ಸಂಬಂಧಗಳನ್ನು ಹೊಂದಿವೆ! ಖಂಡಕ್ಕಿಂತ ಅಖಂಡಕ್ಕೆ ನಾವು ಹೆಚ್ಚಿನ ಒತ್ತನ್ನು ಕೊಡುತ್ತೇವೆ. ನಾವು 'ಅಖಂಡ'ವನ್ನು ಕುರಿತು ಯೋಚಿಸುವಾಗ ಇಡಿಯಾದ ತತ್ತ್ವ ನಮ್ಮ ಕಣ್ಣಮುಂದೆ ಇರುತ್ತದೆ.

ಗೋವಿನ ಹಾಡು ಎಲ್ಲರಿಗೂ ಗೊತ್ತಷ್ಟೆ. ಅದರಲ್ಲಿ 'ಖಂಡವಿದೆ ಕೊ ಮಾಂಸವಿದೆ ಕೊ' ಎಂಬ ಸಾಲುಗಳು ಬರುತ್ತವೆ. ಹುಲಿಗೆ ಖಂಡಾಂಶ ಮಾತ್ರ ಸಾಕು. ಅದು ಅಖಂಡವಾಗಿ ಯೋಚಿಸುವುದಿಲ್ಲ. ಆದರೆ, ಹಸು ಅಖಂಡಾಂಶವಾಗಿ ಯೋಚಿಸುತ್ತದೆ. ಆ ಹಸುವಿಗೆ ತನ್ನ ಕರುವಿನ ನೆನಪಾಗುತ್ತದೆ. ತನ್ನ ಬಳಗದ ನೆನಪಾಗುತ್ತದೆ. ಇದು ಅಖಂಡತ್ವದ ನೆಲೆ. ಈ ತತ್ವವು 'ಅಖಂಡ ಕರ್ನಾಟಕ' ಎಂಬ ಕಲ್ಪನೆಗೂ ಮೂಲ. ಇಲ್ಲೆಲ್ಲ 'ಇಡಿ'ಯಾದ ಸಾಂಘಿಕತತ್ವ ನೆಲೆಯೂರಿ ನಿಂತಿದೆ.

ಕರ್ನಾಟಕವನ್ನು ಕಟ್ಟಿದ ನಮ್ಮ ಎಲ್ಲ ಹಿರಿಯರು 'ಅಖಂಡ'ದ ಉಪಾಸಕರೇ ಆಗಿದ್ದರು. ಅವರು ಸಾಂಸ್ಕೃತಿಕ ಕರ್ನಾಟಕವನ್ನು ಜಪಿಸುತ್ತಿದ್ದರೇ ಹೊರತು 'ರಾಜಕೀಯ ಕರ್ನಾಟಕ'ವನ್ನಲ್ಲ. ಕುವೆಂಪು ತಮ್ಮ ಪದ್ಯವೊಂದರಲ್ಲಿ 'ಅಖಂಡ ಕರ್ನಾಟಕ'ದ ಜಪವನ್ನು ಮಾಡಿದ್ದಾರೆ. ಆದರೆ, ನಾವು ಬರಬರುತ್ತ 'ರಾಜಕೀಯ ಕರ್ನಾಟಕ'ದ ಮೂಲಕ ಇಡಿತತ್ವವನ್ನು ಕೈಬಿಟ್ಟು 'ಬಿಡಿತತ್ವ'ವನ್ನು ಅಪ್ಪಿಕೊಳ್ಳುವುದರತ್ತ ಧಾವಿಸಿದೆವು. ನಮ್ಮ ಕೂಡು ಕುಟುಂಬಗಳು ಬಿಡಿಕುಟುಂಬಗಳಾಗಿ ಬಿಟ್ಟವು. ಈಗೀಗಂತೂ ಬಿಡಿಯಾದುದರ ಚಿಂತನೆಯ ಕಡೆ ನಮ್ಮ ಗಮನ ಹೋಗುತ್ತಿದೆ. ನಮ್ಮ ಮನೆಗಳಲ್ಲಿ ನಾವೀಗ ಒಂಟಿಗಳಾಗುತ್ತಿದ್ದೇವೆ. ನಮ್ಮ ಮನಸ್ಸು ಏಕಾಂಗಿ ಭಾವದಲ್ಲಿ ಉಳಿದು ಬಿಡುತ್ತಿದೆ. ಸಂಬಂಧಗಳು ಇಲ್ಲವಾಗುತ್ತಿವೆ. ಬಂಧುತ್ವವಾಚಕ ಶಬ್ದಗಳು ಇಲ್ಲವಾಗುತ್ತಿವೆ. ನಮ್ಮ ಭಾವುಕ ತಂತುಗಳು ಕಣ್ಮರೆಯಾಗುತ್ತಿವೆ. ಹೀಗಾಗಿ, ಇಡಿ ಮತ್ತು ಬಿಡಿಗಳ ನಡುವೆ ಸಂಕಷ್ಟಕ್ಕೆ ಈಡಾಗಿದ್ದೇವೆ. ಈ ಸಂಗತಿಯನ್ನು ಕುರಿತು ಗೀತೆ ಹೇಳುವ ಒಂದು ಮಾತು ಕುತೂಹಲವನ್ನು ತರಿಸುತ್ತದೆ. ಅದು 'ಅವಿಭಕ್ತಂ ವಿಭಕ್ತೇಷು' ಎಂದು ಹೇಳುವುದೇ ಆ ಮುಖ್ಯ ಸೂತ್ರ. ಬಿಡಿಯಲ್ಲಿ ಇಡಿಯನ್ನು ಕಾಣುವುದೇ ಸಾತ್ವಿಕಜ್ಞಾನ. ಇದು ಕಷ್ಟಕರವಾದದ್ದು. ಬಿಡಿತತ್ವವು ಇಡಿತತ್ವವನ್ನು ನಮ್ಮ ಗ್ರಹಿಕೆಗೆ ತಂದುಕೊಡುತ್ತದೆ. ಜೀವನ ಶೋಧವು ಬಿಡಿಯಾದುದೋ ಇಡಿಯಾದುದೋ ಎಂಬ ಗೊಂದಲ ಎದ್ದಾಗ ಬಿಡಿತತ್ವದಲ್ಲೇ ಇಡಿತತ್ವವನ್ನು ತಿಳಿಯಲು ಅನುವು ಮಾಡಿಕೊಡುತ್ತದೆ. ಇಂಥ ತತ್ವವು ಶೋಧಿಸುವ ಜ್ಞಾನ ಯಾವ ಬಗೆಯದು? ಬಿಡಿಯಲ್ಲಿ ಇಡಿ ತಿಳಿಯುವ ಬಗೆ ಆಯಾ ವ್ಯಕ್ತಿಗಳ ಪ್ರಕೃತಿ ಸ್ವಭಾವಕ್ಕೆ ಹೊಂದಿಕೊಂಡಿರುತ್ತದೆಂದು ಗೀತೆ ತನ್ನ ಮಾತನ್ನು ಮುಂದುವರಿಸುತ್ತದೆ.

ಬೇಂದ್ರೆಯವರು 'ಕೂಡು' ಎಂಬಂಥ ಮಾತನ್ನು ಆಡಿದ್ದಾರೆ. ಅದು 'ಇಡಿ'ತತ್ವದ ಗ್ರಹಿಕೆಯನ್ನು ನಮ್ಮ ಅರಿಕೆಗೆ ತರುತ್ತದೆ. ನಾವು 'ಅವಯವ'ಗಳ ಮೂಲಕ 'ಅವಯವಿ' ತತ್ವವನ್ನು ಗ್ರಹಿಸುವುದು ಅವಶ್ಯವಿದೆ. ಇಷ್ಟು ಮಾತ್ರವಲ್ಲ ಖಂಡಜ್ಞಾನವು ಅಖಂಡಜ್ಞಾನಕ್ಕೆ ಸೋಪಾನವಾಗಬೇಕಾಗಿದೆ. ದೈವದ ಸಾನ್ನಿಧ್ಯಕ್ಕೆ ಏರುವಾಗ ಒಂದೊಂದೇ ಮೆಟ್ಟಿಲನ್ನು ನಾವು ಏರಬೇಕು! ಬಿಡಿಯಾದ ಮೆಟ್ಟಿಲುಗಳು ಅಂತಿಮವಾಗಿ ಇಡಿಯಾದ ರೂಪಕವಾಗಿಯೇ ಕಾಣುವುದು ಅವಶ್ಯ!

ಇಂದಿನ ಸಂಸ್ಕೃತಿಯ ಪ್ರತಿಯೊಂದು ರೂಪವೂ 'ಬಿಡಿ' ತತ್ವವನ್ನೇ ಪರಿಭಾವಿಸುತ್ತಿದೆ. ಆದರೆ, ಇಡಿಯಾದ ಜ್ಞಾನ ಇಲ್ಲದೆ 'ಬಿಡಿ' ತತ್ವಕ್ಕೆ ನೆಲೆ ಇಲ್ಲ. ಕತ್ತಲ ಅನುಭವ ಆಗದೆ, ಹಗಲಿನ ಅನುಭವ ಹೇಗಾದೀತು? ಲೋಕವೆಲ್ಲವೂ ಬಿಡಿ ವ್ಯಾಪಾರವೇ. ಇದು ಪಡಿಪದಾರ್ಥಗಳ ಪ್ರಪಂಚ. ಇಂಥ ಪಡಿ ಪದಾರ್ಥಗಳ ಪ್ರಪಂಚವನ್ನು ಒಗ್ಗೂಡಿಸುವ, ಇಡಿಯಾಗಿ ಕಾಣುವ ಹಂಬಲ ಸಾಧಕರದು, ದಾರ್ಶನಿಕರದು, ಕವಿಗಳದು. ಋತಪ್ರಜ್ಞೆ ಇಡಿ ತತ್ವಕ್ಕೆ ಒಂದು ಮೀಟುಗೋಲು ಎಂಬುದು ಸಾಧಕರ ಅನುಭಾವಿಗಳ ತಿಳಿದವರ ಪಾಡಾಗಿದೆ. ಆದರೆ, ನಾವು ಲೋಕತಂತ್ರ ವ್ಯಾಪಾರದಲ್ಲಿ ಅದಕ್ಕೆ ವಿಮುಖರಾಗಿ ಕುಳಿತುಬಿಟ್ಟಿದ್ದೇವೆ. ಇದರಿಂದ ನಾವು ಪಾರಾಗುವುದೆಂತು? ಈ ಪ್ರಶ್ನೆಗೆ ಜಾಗರೂಕತೆಯಿಂದ ಉತ್ತರವನ್ನು ಹುಡುಕಿಕೊಳ್ಳಬೇಕಾಗಿದೆ.

■ ಪುರಂಜೀವಿ

## ಮಾತೇ ಮುತ್ತು

- ಭಾಗ್ಯವಿರಬಹುದು, ಬೇಕಾದವರು ಇರಬಹುದು, ಫಲ ಮಾತ್ರ ಪಡೆದಷ್ಟೇ.
  —ಎ.ಆರ್. ಕೃಷ್ಣಶಾಸ್ತ್ರಿ
- ಮತ–ಧರ್ಮ ಇಲ್ಲದವ ಕಡಿವಾಣ ಇಲ್ಲದ ಕುದುರೆ.
  —ಲ್ಯಾಟಿನ್ ಗಾದೆ
- ಸೌಂದರ್ಯವೇ ಸತ್ಯ, ಸತ್ಯವೇ ಸಂದರ್ಯ. ಬದುಕಿಗೆ ಬೇಕಿರುವುದು ಇದೆ.
  — ಜಾನ್ ಕೀಟ್ಸ್
- ಜ್ಞಾನಕ್ಕೆ ಸಮನಾದದ್ದು ಬೇರೊಂದಿಲ್ಲ.
  —ಭಗವದ್ಗೀತೆ
- ಉತ್ತಮನಾದವನು ಕಡಿಮೆ ಮಾತನಾಡುತ್ತಾನೆ. ಮಾತಿಗಿಂತ ಹೆಚ್ಚಾಗಿ ಕೆಲಸ ಮಾಡುತ್ತಾನೆ.
  —ಕನ್‌ಫ್ಯೂಷಿಯಸ್
- ಸತ್ಯ, ಸ್ವಾತಂತ್ರ್ಯಗಳೇ ಸಮಾಜದ ಆಧಾರ ಸ್ತಂಭಗಳು.
  —ಹೆನ್ರಿಕ್ ಇಬ್ಸನ್
- ಕೆಟ್ಟದರಲ್ಲೂ ಒಳ್ಳೆಯತನವಿದೆ. ಅದನ್ನು ಭಟ್ಟಿ ಇಳಿಸಿ ತೆಗೆಯಬೇಕು.
  —ಶೇಕ್ಸ್‌ಪಿಯರ್
- ನಿನಗೆ ಶಾಂತಿ ಯಾವುದರಿಂದಲೂ ದೊರೆಯದು, ಅದನ್ನು ನೀನೇ ತಂದುಕೊಳ್ಳಬೇಕು.
  —ಎಮರ್ಸನ್
- ನಾನು ತಪ್ಪನ್ನು ಮಾಡುವುದಿಲ್ಲ ಎಂದುಕೊಳ್ಳುವ ತಪ್ಪನ್ನು ಎಂದೂ ಮಾಡಬಾರದು.
  —ಮಹಾತ್ಮ ಗಾಂಧೀಜಿ
- ತಪ್ಪು ಮಾಡಿದವರಿಗೆ ಶಿಕ್ಷೆ ಆಗದಿದ್ದರೂ ಸರಿ, ನಿರಪರಾಧಿಗೆ ಶಿಕ್ಷೆ ಆಗಬಾರದು.
  —ವಾಲ್ಟೇರ್